೩-೦೦ ಪಿ. ಎಂ.

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ. ನಾನು ಇನ್ನು ಇದಕ್ಕೆ ಕನ್‌ಸೆಂಟ್ ಕೊಟ್ಟಿಲ್ಲ. ಕನ್‌ಸೆಂಟ್ ಕೊಟ್ಟಮೇಲೆ ಈ ಪ್ರಶ್ನೆ ಬರುತ್ತದೆ. ನಾನು ಇನ್ನೂ ರೂಲಿಂಗ್ ಕೂಡ ಕೊಟ್ಟಿಲ್ಲ.

SRI S. BANGARAPPA.—If objection is taken by the treasury benches or by any others, then, we have to stand.

(ಗೊಂದಲ)

ಅಧ್ಯಕ್ಷರು.—ಈಗ ತಾವೆಲ್ಲಾ ಸಭೆ ನಡೆಯುವುದಕ್ಕೆ ಅವಕಾಶ ಕೊಡಬೇಕು. ಮಾನ್ ಮೊಯ್ಲಿಯವರು ಬಹು ದಿವಸಗಳಿಂದ ಈ ಸದನದಲ್ಲಿದ್ದಾರೆ. ಅವರು ಮಂತ್ರಿಗಳಾಗಿಯೂ ಕೆಲಸ ಮಾಡಿದ್ದಾರೆ. ನಾನು ನಿಮ್ಮನ್ನು ಕೇಳಿಕೊಂಡು, ಅವರನ್ನು ಕೇಳಿಕೊಂಡು ಮುಂದೆ ರೂಲಿಂಗ್ ಕೊಡಬೇಕು.

> "The Speaker, if he gives consent under rule 60 and holds that the matter proposed to be discussed is in order, shall after the questions and before the list of business is entered upon, call the member conceerned who shall raise in his place and ask for leave to move the adjournment of the House."

'If he gives consent'

ಎಂದು ಇದೆ. ದಯವಮಾಡಿ ರೂಲ್ಸ್ ನೋಡಿ. ನಾನು ಕನ್ಸೆಂಟ್ ಕೊಟ್ಟಮೇಲೆ ಆ ಪ್ರಶ್ನೆ ಬರುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಒಂದೇ ಒಂದು ಉದಾಹರಣೆ ಕೊಡುತ್ತೇನೆ.

ಅಧ್ಯಕ್ಷರು. ನೀವು ಈಗಾಗಲೇ ನಾಕಷ್ಟು ಆರ್ಗ್ಯುಮೆಂಟ್ ಮಾಡಿದ್ದೀರಿ. ಒಂದಲ್ಲ ೧೦ ಉದಾಹರಣೆ ಕೊಟ್ಟಿದ್ದೀರಿ. ನಾನು ಈಗ ರೂಲಿಂಗ್ ಕೊಡಬೇಕು, ದಯವಿಟ್ಟು ಎಲ್ಲರೂ ಕುಳಿತು ಕೊಳ್ಳಬೇಕು. ತಾವೆಲ್ಲರೂ ನಾಕಷ್ಟು ವಿಷಯವನ್ನು ಸರ್ಕಾರದ ಎದುರಿಗೆ ಇಟ್ಟಿದ್ದೀರಿ. ಎರಡೂವರೆ ಗಂಟೆಗಳ ಕಾಲ ತಪ್ಪಿಗೆ ಅವಕಾಶ ಕೊಟ್ಟಿದ್ದೇನೆ. ಅವರೂ ಕೂಡ ಸಮಂಜಸವಾದ ಉತ್ತರ ಕೊಟ್ಟಿದ್ದಾರೆ. ನಾನು ಈ ನಿಲುವಳಿ ಸೂಚನೆಯನ್ನು ರಿಜೆಕ್ಟ್ ಮಾಡಿದ್ದೇನೆ, ಈಗ ಮುಂದಿನ ವಿಷಯಗಮನಸೆಳೆಯುವ ಸೂಚನೆ. ಮಾನ್ಯ ಖರ್ಗೆಯವರೇ ನಿಮಗೆ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವುದಕ್ಕೆ ಕಾಲಾವಕಾಶ ಕೊಡುತ್ತೇನೆ. ತಾವು ಬಹಳ ದಿವಸಗಳಿಂದ ಈ ಸದನದಲ್ಲಿ ಇದ್ದೀರಿ. ಮಂತ್ರಿಗಳಾಗಿಯೂ ಕೆಲಸ ಮಾಡಿದ್ದೀರಿ. ಶಾಸಕರಾಗಿಯೂ ಕೆಲಸ ಮಾಡಿದ್ದೀರಿ. ಈಗ ಉಪನಾಯಕರಾಗಿಯೂ ಕೆಲಸ ಮಾಡುತ್ತಿದ್ದು ಒಳ್ಳೆಯ ಹೆಸರು ತೆಗೆದುಕೊಳ್ಳುತ್ತಿದ್ದೀರಿ. ನಾನು ಈಗಾಗಲೇ ರೂಲಿಂಗ್ ಕೊಟ್ಟಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಸೆಂಬ್ಲಿಯಿಂದ ಚುನಾಯಿತರಾಗಿ ಬಂದಂಥ ನಾಲ್ಕಾರು ಜನರ ಹತ್ತಿರ ಅಡ್ರಸ್ ತೆಗೆದುಕೊಂಡು, ರಾತ್ರೋರಾತ್ರಿ ಫೋನ್ ಮಾಡಿ, ಹಳ್ಳಿಯಲ್ಲಿ ನಿಮ್ಮ ಹೆಸರನ್ನು ಬರೆಯಿಸಿ, ಅಲ್ಲಿಯ ವಿಳಾಸ ಕೊಡಿ ಎಂದು ಫೋನ್ ಮಾಡಿದ್ದಾರೆ. ಅದನ್ನು ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು.—ಅದು ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಇದಕ್ಕೆ ಸಮರ್ಪಕವಾದ ಉತ್ತರವನ್ನು ಅವರು ಕೊಡುತ್ತಿಲ್ಲ, ಡಿಫೆಕ್ಟಿವ್ ವೋಟರ್ಸ್ ಲಿಸ್ಟ್ ಮಾಡಿ ಇದ್ದಾರೆ. ಇವತ್ತಿನ ದಿವಸ ಪ್ರಜಾಪ್ರಭುತ್ವದ ಕೊಲೆ ಆಗುತ್ತಿದೆ, ಇದನ್ನು ವಿರೋಧಿಸಿ ನಾವು ವಾಕೌಟ್ ಮಾಡಿ ಹೋಗುತ್ತಿದ್ದೇವೆ.

(ವಿರೋಧ ಪಕ್ಷದ ನಾಯಕರು, ಮಿತ್ರಪಕ್ಷ ಕಾಂಗ್ರೆಸ್ (ಐ) ಪಕ್ಷದ ಸದಸ್ಯರುಗಳ ಜೊತೆಗೆ ಸಭಾತ್ಯಾಗ ಮಾಡಿದರು)